ದಿನಾಂಕ-17-09-2022 ರಂದು ಸಮಯ ಬೆಳಿಗ್ಗೆ 10.00 ಗಂಟೆಗೆ ವಾರ್ಡ ಸಂಖ್ಯೆ-52 ಮಹಾಲಕ್ಷ್ಮೀಪುರಂ ವಾರ್ಡ ಕಛೇರಿಯಲ್ಲಿ ವಾರ್ಡ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರು ಮತ್ತು ವಾರ್ಡ ಕಂದಾಯ ಪರಿವೀಕ್ಷಕರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು..

ಹಾಜರಿದ್ದ ಅಧಿಕಾರಿಗಳು

1. ಶ್ರೀ. ಹೆಚ್ ರಂಗನಾಥ ನೋಡಲ್ ಅಧಿಕಾರಿಗಳು (ಅಧ್ಯಕ್ಷರು)
2. ಶ್ರಿ ನಂಜುಂಡಪ್ಪ ಜಿ ವಿ ಕಂದಾಯ ಪರಿವೀಕ್ಷಕರು (ಕಾರ್ಯದರ್ಶಿಗಳು)
3. ಜಿ ಟಿ ಧನಂಜಯ ಸಹಾಯಕ ಅಭಿಯಂತರರು ವಾರ್ಡ-52
4. ಶ್ರಿ ಲೋಹಿತ್ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ-52
5. ಶ್ರೀಮತಿ ಗೀತಾ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ-52
6. ಶ್ರಿಮತಿ ಪುಷ್ಪ ಸಹಾಯಕ ಅಭಿಯಂತರರು (ಬಿ ಡಬ್ಲೂ ಎಸ್ ಎಸ್ ಬಿ)
7. ಶ್ರೀ ಕಾಂತರಾಜು ಬೀದಿ ದೀಪ ಗುತ್ತಿಗೆದಾರರು (ಎಲ್. ಇ ಡಿ ಲೈಟ್ಸ್)
8. ವೆಂಕಟೇಶ್ ಜಿ ಕೆ ಕೆಲಸ ಪರಿವೀಕ್ಷಕರು ವಾರ್ಡ-52
9. ಗಂಗಾಧರಚಾರಿ ಜೆ ಮಾರ್ಷಲ್ ವಾರ್ಡ-52
10. ರಾಮಣ್ಣ ಜಿ ನಿವಾಸಿಗಳು ಎ ಜಿ ಬಿ ಲೇಔಟ್ ವಾರ್ಡ-52

ಶ್ರಿ ನಂಜುಂಡಪ್ಪ ಜಿ ವಿ ಕಾರ್ಯದರ್ಶಿಗಳು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಇತರೆ ಅಧಿಕಾರಿಗಳು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

ಮಾನ್ಯ ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಓದಿ ತಿಳಿಸಿದರು.

ಈ ದಿನದ ಸಭೆಯಲ್ಲಿ ಚರ್ಚಿಸಿದ ಹಾಗೂ ಕ್ರಮವಹಿಸಲಾದ ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ | ವಿವರ | ಕ್ರಮ |
|---|---|---|
| 01 | ವಾರ್ಡ ಕಛೇರಿ-52(197/ಎ) ಅನ್ನು ಗಂಗಮ್ಮ ದೇವಸ್ಥಾನದ ಹತ್ತಿರ ಮೈಕೋಲೇಔಟ್ ನಿಂದ ಹಾಲಿ ಡಾ. ರಾಜ್ ಕುಮಾರ್ ಒಳಾಂಗಣ ಕ್ರೀಡಾಂಗಣದ ಹಿಂಭಾಗದಲ್ಲಿರುವ ಕಟ್ಟಡಕ್ಕೆ ವರ್ಗಾಯಿಸುವ ಬಗ್ಗೆ. | ಕಂದಾಯ ಪರಿವೀಕ್ಷರು ಮತ್ತು ಕಂದಾಯ ವಸೂಲಿಗಾರರಿಗೆ |
| 02 | ಡಾ. ರಾಜ್ ಕುಮಾರ್ ಒಳಾಂಗಣ ಕ್ರೀಡಾಂಗಣದ ಆವರಣವನ್ನು ಸ್ವಚ್ಛಗೊಳಿಸುವ ಬಗ್ಗೆ. | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ-67 |
| 03 | ಡಾ. ರಾಜ್ ಕುಮಾರ್ ಒಳಾಂಗಣ ಕ್ರೀಡಾಂಗಣದ ಆವರಣದಲ್ಲಿ ಅನಧಿಕೃತವಾಗಿ ನಿಲ್ಲಿಸಿರುವ ವಾಹನಗಳನ್ನು ತೆರವುಗೊಳಿಸುವ ಬಗ್ಗೆ. | ಕಾವಲುಗಾರರು (ಭದ್ರತಾ ಸಿಬ್ಬಂದಿ) |
| 04 | ವಾರ್ಡ ವ್ಯಾಪ್ತಿಯಲ್ಲಿರುವ ರಸ್ತೆ ಗುಂಡಿಗಳನ್ನು ತುರ್ತಾಗಿ ತುಂಬಲು ಸಭೆಯಲ್ಲಿ ತಿಳಿಸಲಾಯಿತು | ವಾರ್ಡಅಭಿಯಂತರರು ವಾರ್ಡ ಸಂಖ್ಯೆ-68 |

| | | |
|---|---|---|
| 05 | 7 ನೇ ಅಡ್ಡರಸ್ತೆ, ಗಣೇಶ ಬ್ಲಾಕ್, 1ನೇ ಮುಖ್ಯರಸ್ತೆ ಜೆ ಸಿ ನಗರ ಹಾಗೂ ಇತರೆ ಪ್ರದೇಶಗಳಲ್ಲಿ (BWSSB) ಸ್ಯಾನಿಟರಿ ಲೈನ್ ಸೋರಿಕೆಯಿಂದ ರಸ್ತೆ ಕುಸಿಯುತ್ತಿರುವುದರಿಂದ ಕೂಡಲೆ ದುರಸ್ತಿಗೊಳಿಸಲು ತಿಳಿಸಿದೆ | BWSSB ಅಭಿಯಂತರರು |
| 06 | ಡಾ. ರಾಜ್ ಕುಮಾರ್ ಒಳಾಂಗಣ ಕ್ರೀಡಾಂಗಣದ ಆವರಣದಲ್ಲಿ ಅನಧಿಕೃತವಾಗಿ ನಿಲ್ಲಿಸಿರುವ ವಾಹನಗಳನ್ನು ತೆರವುಗೊಳಿಸುವ ಬಗ್ಗೆ ಹಾಗೂ ಸಂಜೆ ಮತ್ತು ರಾತ್ರಿ ಸಮಯದಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿದ್ದು ತಡೆಯುವ ಬಗ್ಗೆ. | ಮಹಾಲಕ್ಷ್ಮೀಪುರಂ ಪೋಲಿಸ್ ಠಾಣೆ |
| 07 | ಈ ದಿನ ವಾರ್ಡ ಕಮಿಟಿ ಸಭೆಗೆ ಬೇರೆ ಬೇರೆ ಕೆಲವು ಇಲಾಖೆಯ ಅಧಿಕಾರಿಗಳು ಗೈರು ಹಾಜರಾಗಿದ್ದು ಮಾನ್ಯ ಮುಖ್ಯ ಆಯುಕ್ತರ ಸೂಚನೆಯಂತೆ ಪ್ರತಿ ತಿಂಗಳ 1ನೇ ಶನಿವಾರ ಮತ್ತು 3ನೇ ಶನಿವಾರ ವಾರ್ಡಕಮಿಟಿ ಸಭೆನಡೆಯುತ್ತಿದ್ದು ಮುಂದಿನ ಎಲ್ಲಾ ಸಭೆಗಳಿಗೆ ಎಲ್ಲಾ ಇಲಾಖೆಯ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗಲು ತಿಳಿಸಲಾಗಿದೆ. | ವಾರ್ಡಕಮಿಟಿ ಸದಸ್ಯರ ಗಮನಕ್ಕೆ ತರಲಾಗಿದೆ |

17/9/2022

ನೋಡಲ್ ಅಧಿಕಾರಿ (ಅಧ್ಯಕ್ಷರು)
ವಾರ್ಡ ಕಮಿಟಿ ವಾರ್ಡ-52-
ಮಹಾಲಕ್ಷ್ಮೀಪುರಂ